**Kannada Prabha**
**Title :**
**Author :**
**Location :**
**Article Date : 12/22/2015**

# ಜನತಾ ಪ್ರಜಾಪ್ರಭುತ್ವಕ್ಕೆ ಹೊಸ ಅರ್ಥ ಕೋ

## ಪಂಚಾಯತ್‌ಗಳು ಸ್ವಾಯತ್ತ ಸ್ಥಳೀಯಾಡಳಿತ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಲು ಇದೊಂದು ಸದವಕಾಶವಾದ್ದರಿಂದ ಈ ಅವಕಾಶದ ಸದ್ಬಳಕೆಯ

ರಾಜ್ಯ ವಿಧಾನಮಂಡಲದ ಉಭಯ ಸದನಗಳ ಒಪ್ಪಿಗೆ ಪಡೆದುಕೊಂಡಿರುವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಮಸೂದೆಗೆ ರಾಜ್ಯಪಾಲರು ಒಪ್ಪಿಗೆ ಕೊಟ್ಟಾಗಿದೆ. ಕರ್ನಾಟಕ ಗ್ರಾಮ ಸ್ವರಾಜ್ ತಿದ್ದುಪಡಿ ಮಸೂದೆಯ ಕರಡು ಪ್ರತಿ ರೂಪಿಸಲು ರಮೇಶ್ ಕುಮಾರ್ ಸಮಿತಿಗೆ ಎರಡು ವರ್ಷಗಳು ಬೇಕಾದವು (ಒಂದು ವರ್ಷ ಅಧಿಕೃತ ಮತ್ತು ಇನ್ನೊಂದು ಅನಧಿಕೃತ). ಈ ಮಸೂದೆ, ಶೇ.90ರಷ್ಟು ಅಧಿಕೃತ ಸರ್ಕಾರಿ ಮಸೂದೆಯೆಂಬ ಕುಹಕದ ಮಾತೂ ಇದೆ. ಇರಲಿ, ಬಹಳ ಆಸಕ್ತಿಯ ವಿಷಯ ಹಾಗೂ ದುರದೃಷ್ಟಕರ ಸಂಗತಿ ಏನೆಂದರೆ, ಮಸೂದೆ ಮೇಲೆ ಯಾವುದೇ ಚರ್ಚೆ ನಡೆಯದೆ ಕೇವಲ ಎರಡು ನಿಮಿಷಗಳಲ್ಲಿ ಶಾಸನಸಭೆಯ ಒಪ್ಪಿಗೆ ಸಿಕ್ಕಿದ್ದು. ವಿಧಾನಮಂಡಲದ ಉಭಯ ಸದನಗಳಲ್ಲಿ ಮಸೂದೆಯ ಮೇಲೆ ಗಂಭೀರ ಚರ್ಚೆ ನಡೆದು ಮಸೂದೆ ಇನ್ನಷ್ಟು ಪರಿಶುದ್ಧಗೊಳ್ಳಲಿದೆ, ಇನ್ನೂ ಕೆಲ ಅಂಶಗಳು ಮಸೂದೆಯಲ್ಲಿ ಸೇರ್ಪಡೆಯಾಗಲಿದೆ ಎಂದು ನಾವೆಲ್ಲ ನಿರೀಕ್ಷಿಸಿದ್ದೆವು. ಆದರೆ ಹಾಗೇನೂ ಆಗಲಿಲ್ಲ. ಆದರೂ ಇದೊಂದು ಮಹತ್ವದ ಹೆಜ್ಜೆ.

ಪಂಚಾಯತ್ ರಾಜ್‌ನಲ್ಲಿ ಕರ್ನಾಟಕಕ್ಕೊಂದು ವಿಶಿಷ್ಟಸ್ಥಾನವಿದೆ. ಸಂವಿಧಾನದ73ನೇತಿದ್ದುಪಡಿಯನ್ನು ಚಿಂತಿಸುವ ಮೊದಲೇ ರಾಜ್ಯವು ಈ ದಿಸೆಯಲ್ಲಿ ಕ್ರಮ ಕೈಗೊಂಡಿತ್ತು. ಹಲವು ದಶಕಗಳಿಂದ ಪಂಚಾಯತ್ ರಾಜ್‌ನಲ್ಲಿ ಮುಂಚೂಣಿ ಸ್ಥಾನದಲ್ಲಿದ್ದ ರಾಜ್ಯವು, ಕಳೆದ ಹತ್ತು ವರ್ಷಗಳಿಂದೀಚೆಗೆ ಈ ಗೌರವವನ್ನು ಕೇರಳಕ್ಕೆ ಬಿಟ್ಟುಕೊಟ್ಟಿದೆ. ಇದಕ್ಕೆ ಪ್ರಬಲ ಕಾರಣಗಳಿವೆ. ಈ ಶಾಸನವನ್ನು ದುರ್ಬಲಗೊಳಿಸುವಲ್ಲಿ ಸರ್ಕಾರಿ ಅಧಿಕಾರಿಗಳು ಮತ್ತು ಪಟ್ಟಭದ್ರ ಹಿತಾಸಕ್ತಿಗಳು ಕೆಲಸ ಮಾಡಿರುವುದು ಗುಟ್ಟಿನ ಸಂಗತಿಯೇನೂ ಅಲ್ಲ.

ಸ್ಥಳೀಯಾಡಳಿತ ಸಂಸ್ಥೆಗಳಿಗೆ ಅಧಿಕಾರ ವಿಕೇಂದ್ರೀಕರಣ ಎಂಬುದು ಜನತೆಯ ಪಾಲ್ಗೊಳ್ಳುವಿಕೆಯ ಪ್ರಜಾಪ್ರಭುತ್ವಕ್ಕೊಂದು ಅತ್ಯುತ್ತಮ ಉದಾಹರಣೆ. ಸಮುದಾಯವೊಂದರಅಂಗವಾಗಿರುವ ವ್ಯಕ್ತಿಯೊಬ್ಬ ತನ್ನ ಭವಿಷ್ಯ ನಿರ್ಧರಿಸುವ ಜೊತೆಗೆ ಸಮುದಾಯದ ಭವಿಷ್ಯ ನಿರ್ಧರಿಸುವ ಮಹತ್ವದ ಅಂಶ ಈ ಕಾಯಿದೆಯಲ್ಲಿ ಅಡಕವಾಗಿದೆ. ಸ್ವಯಂ ಆಡಳಿತದ ಕಲ್ಪನೆಯನ್ನು ಸ್ವರೂಪ ವ್ಯವಸ್ಥೆಯನ್ನಾಗಿ ಪಂಚಾಯತ್ ರಾಜ್ ಪರಿವರ್ತಿಸುತ್ತದೆ. ಗ್ರಾಮ ಸ್ವರಾಜ್‌ನಂಥ ಅದ್ಭುತ ಕಲ್ಪನೆ ಮಹಾತ್ಮ ಗಾಂಧೀಜಿಯವರ ಕಲ್ಪನೆಯ ಕೂಸಾಗಿ ಭಾರತದಲ್ಲೇ ಹುಟ್ಟಿಕೊಂಡಿತು. ಹಳ್ಳಿಗಳಲ್ಲಿ ಪ್ರಬಲ ಜಾತಿಗಳಿಗೆ ದಲಿತ ವರ್ಗಗಳ ಜನರನ್ನು ಮಣಿಸಲು ಇದು ಅಧಿಕಾರ ನೀಡುತ್ತದೆ ಎಂಬ ಕಳವಳ ಸಂವಿಧಾನಶಿಲ್ಪಿ ಬಿ ಆರ್ ಅಂಬೇಡ್ಕರ್‌ಗೆ ಇದ್ದಿದ್ದರಿಂದ ನಮ್ಮ ಸಂವಿಧಾನದಲ್ಲಿ ಗ್ರಾಮ ಸ್ವರಾಜ್ ಸೇರ್ಪಡೆಯಾಗಲಿಲ್ಲ.

ಕರ್ನಾಟಕದಲ್ಲಿ ಪಂಚಾಯತ್ ರಾಜ್‌ನ ಯುಗ ಪ್ರವರ್ತಕರಾದ ಅಬ್ದುಲ್ ನಜೀರ್‌ಸಾಬ್ ಮತ್ತು ರಾಮಕೃಷ್ಣ ಹೆಗಡೆಯವರು ಕೈಗೊಂಡ ಕ್ರಾಂತಿಕಾರಿ ಹೆಜ್ಜೆಗಳು ಹಾಗೂ ಮನವೊಲಿಕೆಯ ಕ್ರಮಗಳಿಂದ 1983ರಲ್ಲಿ ರಾಜ್ಯದಲ್ಲಿ ಮೊತ್ತಮೊದಲ ಬಾರಿಗೆ



**ಹೊಸ ನೋಟ**
**ನಂದನಾ ರೆಡ್ಡಿ**
editor@kannadaprabha.in

ಪಂಚಾಯತ್ ರಾಜ್ ಕಾಯಿದೆ ಅನುಷ್ಠಾನಗೊಂಡಿತು. ನಂತರದ ವರ್ಷಗಳಲ್ಲಿ, ರಾಜೀವ್ ಗಾಂಧಿ ಮತ್ತು ನರಸಿಂಹ ರಾವ್ ಅವರ ಪ್ರಯತ್ನದ ಫಲವಾಗಿ ಸಂವಿಧಾನಕ್ಕೆ 73ನೇ ತಿದ್ದುಪಡಿಯಾಯಿತು (1992). ಅದೂ ಎರಡನೇ ಪ್ರಯತ್ನದಲ್ಲೇ ಎಂಬುದು ಗಮನಾರ್ಹ. ಮುಂದೆ, ಎಂ ವೈ ಘೋರ್ಪಡೆ, 1993ರ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆಗೆ ಸ್ಪಷ್ಟ ರೂಪ ಕೊಟ್ಟರು. ಆದರೆ ಉತ್ತಮ ಮುನ್ನೋಟ ಹೊಂದಿದ್ದ ಈ ಕಾಯಿದೆಯನ್ನು ನೂರಾರು ಸರ್ಕಾರಿ ಆದೇಶಗಳ ಮೂಲಕ ವಿರೂಪಗೊಳಿಸಲಾಯಿತು; ಗ್ರಾಮೀಣರು, ಸ್ಥಳೀಯಾಡಳಿತಗಳ ಅಧಿಕಾರ ಕಿತ್ತುಕೊಳ್ಳಲಾಯಿತು.

ದೇಶದ ಬಹುತೇಕ ರಾಜ್ಯಗಳು ಪಂಚಾಯತ್ ರಾಜ್ ಕಾಯಿದೆ ಅಂಗೀಕರಿಸಿದ್ದರೂ, ಅನುದಾನ ಹಂಚಿಕೆ, ಕೆಲಸ ನಿರ್ವಹಣೆ, ಕಾರ್ಯಭಾರ ಇತ್ಯಾದಿ ವಿಚಾರಗಳಲ್ಲಿ ಎಲ್ಲೂ ಇಷ್ಟೊಂದು ಪ್ರಮಾಣದಲ್ಲಿ ವಿಕೇಂದ್ರೀಕರಣ ನಡೆದ ಉದಾಹರಣೆಗಳಿಲ್ಲ. ಆದರೆ ಅಧಿಕಾರ ವಿಕೇಂದ್ರೀಕರಣಕ್ಕೆ ರಾಜ್ಯದ ಬಹುತೇಕ ಶಾಸಕರು ವಿರೋಧಿಗಳಾಗಿದ್ದಾರೆ ಎಂಬುದು ಗುಟ್ಟಿನ ಸಂಗತಿಯೇನಲ್ಲ. ಇವರ ವಿರೋಧದ ಹಿಂದಿನ ಕಾರಣ ಮಾತ್ರ ಕುತೂಹಲಕಾರಿ; ಅಧಿಕಾರ ವಿಕೇಂದ್ರೀಕರಣವು ಭ್ರಷ್ಟಾಚಾರದ ವಿಕೇಂದ್ರೀಕರಣಕ್ಕೆ ಅವಕಾಶ ಮಾಡಿಕೊಡುತ್ತದೆ ಎಂಬ ಕಳವಳವಂತೆ. ಅಕ್ರಮ ಸಂಪತ್ತಿನಲ್ಲಿ ಲಾಭ ಪಡೆದುಕೊಳ್ಳಲು ಮತ್ತು ಇಂಥ ಸಂಪತ್ತಿಗೆ ತಾವು ಪಾಲುದಾರರು ಎಂಬುದನ್ನು ಒಪ್ಪಿಕೊಳ್ಳಲು ಅವರೆಂದೂ ಹಿಂದೇಟು ಹಾಕುವುದಿಲ್ಲ ಎಂಬುದು ಅಷ್ಟೇ ಅಚ್ಚರಿಯ ಸಂಗತಿ. ಕರ್ನಾಟಕದ ಗ್ರಾಮ ಸ್ವರಾಜ್ ಮಸೂದೆಗೆ ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿರುವುದು ಕಾಂಗ್ರೆಸ್ ಹೈಕಮಾಂಡ್‌ನ ಒತ್ತಡದ ಮೇರೆಗೆ ಇದ್ದರೂ ಇರಬಹುದು!

ಕರ್ನಾಟಕ ಗ್ರಾಮ ಸ್ವರಾಜ್ ಮಸೂದೆ ಕಾಯಿದೆಯಾದಾಗ, ಸ್ಥಳೀಯಾಡಳಿತ ಸಂಸ್ಥೆಗಳಿಗೆ ಬಹುತೇಕ ಸಂಪೂರ್ಣ ಸ್ವಾಯತ್ತೆ ಲಭಿಸುತ್ತದೆ. ಗ್ರಾಮಸಭೆಗಳು ತಾವು ಇಚ್ಛಿಸುವ ಕಾರ್ಯಕ್ರಮ, ಯೋಜನೆಗಳ ರೂಪುರೇಷೆ ಸಿದ್ಧಪಡಿಸುವುದು, ಅವುಗಳ ಕಾರ್ಯಾರಂಭ ಮತ್ತು ಅನುಷ್ಠಾನ ಇದರಿಂದ ಸಾಧ್ಯ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಚಿವರ ನಿರ್ದೇಶನದ ಮೇರೆಗೆ ಕಾಮಗಾರಿಗಳು ಅನುಷ್ಠಾನಗೊಳ್ಳುವ ಬದಲು, ಗ್ರಾಮ

ಸ್ಥರು, ಗ್ರಾಮಸಭೆಗಳ ಪ್ರತಿನಿ
ಜನರ ಆಶೋತ್ತರ ಆಧರಿಸಿ

ಗ್ರಾಮ ಸ್ವರಾಜ್ ಕಾಯಿ
ತ್‌ಗಳಿಗೆ ಶೇ.20ರಷ್ಟು ಏಕೀ
ತ್ತದೆ. ಜೊತೆಗೆ ತೆರಿಗೆ ಮತ್ತು
ಸಂಪನ್ಮೂಲ ಕ್ರೋಢೀಕರಿಸ
ತಮ್ಮದೇ ಕಾನೂನು ಅಂಗೀಕ
ರಾಜ್ಯ, ಕೇಂದ್ರ ಸರ್ಕಾರಗ
ಅನುದಾನಗಳ ಮೇಲಿನ ಅ
ಮಾಡಿಕೊಳ್ಳುವ ಅವಕಾಶ ಗ

ರೈತ ಸಮುದಾಯದಿಂದ
ಪಾಟೀಲರಿಗೆ ಪ್ರಸ್ತುತ ಬಿಕ್ಕ
ತ್ತಿರುವ ಕೃಷಿಕರು, ಗ್ರಾಮೀಣ
ಗೊತ್ತಿದೆ. ರಾಜ್ಯದಲ್ಲಿ ನ
ಆತ್ಮಹತ್ಯೆ ಮಾಡಿಕೊಂಡಿ
ಪಂಚಾಯತ್ ರಾಜ್ ಕಾಯಿ
ಅವರ ಪ್ರಯತ್ನ ಸ್ವಾಗತಾಹ
ಗ್ರಾಮವಾಸಿಗಳ ಕುರಿತಾದ
ಕಳವಳಗಳು, ಸ್ಥಳೀಯ ಮ
ತ್ತಿರುವ ಸಮಸ್ಯೆಗಳ ಪರಿಹ
ಜೊತೆಗೆ, ಗ್ರಾಮವಾಸಿಗಳಿಗೆ
ತುರ್ತು ನೆರವಿನ ಈಡೇರಿಕೆ
ಕೇಂದ್ರಗಳ ಮೇಲೆ
ಸಹಾಯಕವಾಗಬಹುದು.

ಮೂರು ಹಂತಗಳ ಪಂಚ